ಆ ಧೂರ್ತ... ಈಗ ಮನೇನೂ ಕಟ್ಕೊಂಡಿದಾನೆ. ಏನು ಮಾಡ್ಬೇಕೋ ತೋಚ್ತಿಲ್ಲ... ನಂಗೂ ವಯಸ್ಸಾಯ್ತು. ಆರೋಗ್ಯ ಬೇರೆ ಸರಿ ಇಲ್ಲ. ಕೋರ್ಟು, ಕಚೇರಿ, ಪೊಲೀಸು ಎಂದೆಲ್ಲಾ ನನ್‌ಹತ್ರ ಓಡಾಡೋಕ್ಕೆ ಸಾಧ್ಯಾನೇ ಇಲ್ಲ. ನನ್ನ ಮಗಳೋ ಬರೀ ಮುಗ್ಧೆ ಸರ್... ಅಲ್ದೇ ಸಿಕ್ಕಾಪಟ್ಟೆ ಪೊಕ್ಕಿ ಬೇರೆ...

ಇದರ ಬಗ್ಗೇ ಸುಮಾರು ಜನರಲ್ಲಿ ವಿಚಾರ್ಸ್ತಾ ವಿಚಾರ್ಸ್ತಾ ನಿಮ್ಮ ವಿಷ್ಯ ತಿಳೀತು. ಆ ಏರಿಯಾದಲ್ಲಿ ತುಂಬಾ ಹೆಸರುಂಟಂತೆ ನಿಮ್ಗೆ. ಅಲ್ಲದೇ ರಿಯಲ್ ಎಸ್ಟೇಟ್ ವ್ಯವಹಾರಾನೂ ಮಾಡ್ತೀರಂತೆ. ನೀವು ಮನಸು ಮಾಡಿದ್ರೆ ಗ್ಯಾರಂಟೀ ಏನಾದ್ರೂ ಮಾಡ್ತೀರಾ ಅಂತಾ ಯಾರೋ ಹೇಳಿದ್ರು. ದಯವಿಟ್ಟು ನಮ್ಗೆ ಹೆಲ್ಪ್ ಮಾಡಿ... ಸರ್... ನಾನು ಯಾವ ಪುರಾವೆ ಬೇಕಾದ್ರೂ...'

ಆ ವ್ಯಕ್ತಿ ಮಾತು ಮುಂದುವರಿಸುತ್ತಿದ್ದಂತೆ ಗೋವಿಂದರಾಯನಿಗೆ ಎದೆ ಬಡಿತ ಹೆಚ್ಚಾಗತೊಡಗಿತು. ನಡುವೆ ಆತನ ಮಗ ಕೈಲೆರಡು ಪುಸ್ತಕ ಹಿಡಿದು ಮನೆಯಿಂದ ಹೊರಬೀಳುತ್ತಿರುವುದನ್ನು ನೋಡಿದ ಆತ, 'ಸರ್... ಒಂದೇ ಒಂದು ನಿಮಿಷ ಲೈನಿನಲ್ಲಿರಿ...' ಎನ್ನುತ್ತ, 'ಎಲ್ಲಿಗೋಗ್ತಾ ಇದೀಯೋ?... ಲೋಫರ್...' ಎಂದು ಗದರಿಸಿ ಕೇಳುವ ಮುಖಭಾವದಲ್ಲಿ ಕೈಯ್ಯಿಂದ ಸಂಜ್ಞೆ ಮಾಡಿದ.

ಅತೀ ಬಡಪಾಯಿಯ ಮುಖ ಹೊತ್ತು, 'ಫ್ರೆಂಡ್ ಮನೆಗೆ ಓದ್ಕೋಳೋಕೆ ಹೋಗ್ತಿದೀನಿ. ಇವತ್ತು ಟ್ಯೂಷನ್ ಇಲ್ಲ...' ಎಂದು ದೈನ್ಯದಿಂದ ಹೇಳುತ್ತ, ಅಪ್ಪನ ಅನುಮತಿಗೆ ಕಾದು ನಿಂತ ಮಗ.

---

**ಕರ್ಕಿ ಕೃಷ್ಣಮೂರ್ತಿ**

ವೃತ್ತಿಯಲ್ಲಿ ಸಿವಿಲ್ ಎಂಜಿನಿಯರ್. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕರ್ಕಿ ಅವರ ಊರು. ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿರುವ ಅವರು ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಸೀನಿಯರ್ ಜನರಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. 'ಮಳೆಮಾರುವ ಹುಡುಗ' ಎನ್ನುವ ಕಥಾಸಂಗ್ರಹ ಪ್ರಕಟವಾಗಿದೆ. ಲೇಖನ ಹಾಗೂ ಕತೆಗಳನ್ನು ಪ್ರಕಟಿಸಿದ್ದಾರೆ.